ಚಂದನಿಕಾಳ ಪಾತ್ರದ್ದು ಸಾಯಂಕಾಲ ಮತ್ತೆ ಇತ್ತು. ಆನಂದ ಹೊರಗೆ ಹೊರಟದ್ದು ಕಾಣಿಸಿ ತಾನೂ ಹೋಗಬೇಕೆನಿಸಿತು. ಆದರೆ ಆತ ಹೊರಟದ್ದು ತೋಟಕ್ಕಾಗಿತ್ತು. ಸ್ವಲ್ಪ ದೂರವಿದ್ದುದಕ್ಕೆ ಮೋಟರ್ ಬೈಕ್ ಬಳಸುತ್ತಿದ್ದ. ಮಧ್ಯದಲ್ಲಿ ಸ್ವಲ್ಪದೂರ ಜನ ಸಂಚಾರ ಜಾಸ್ತಿಯಿರುವ ದಾರಿ ಸಿಗುತ್ತಿತ್ತು. ಅವಳನ್ನು ಹಿಂದೆ ಕೂಡಿಸಿಕೊಂಡು ಹೋಗುವುದು ಅಕಾರಣ ಸುದ್ದಿಯಾಗುವುದು ಹಿತವೆನಿಸಲಿಲ್ಲ. ಮಾರುತಿ ಓಮ್ನಿಯನ್ನು ತೆಗೆದು ಅವಳನ್ನು ಕೂಡಿಸಿಕೊಂಡು ಗೇಟಿಂದ ಹೊರಗೆ ಬಂದ. ಒಂದು ಕಿಲೋಮೀಟರಷ್ಟು ದೊಡ್ಡರಸ್ತೆಯಿತ್ತು. ಗ್ಲಾಸ್ ಏರಿಸಿ, ಮುಂದೆ ಬಲಕ್ಕೆ ತಿರುಗಿದ ಮೇಲೆ ಬೇಕಿದ್ದರೆ ಗ್ಲಾಸ್ ಇಳಿಸಬಹುದು ಅಂದ. ತೋಟದ ಹತ್ತಿರವೇ ದಿಬ್ಬದ ಮೇಲೆ ನಿಂತಿತು ಕಾರು. ಕೆಳಗಿಳಿದವಳಿಗೆ ಬಲಗಡೆ ಆವತ್ತು ನೋಡಿದ ಆ ವಿಶಾಲವಾದ ಕೆರೆ ಸ್ವಲ್ಪವೆ ದೂರದಲ್ಲಿ ಗೋಚರಿಸಿತು. ಅಗಳ ದಾಟಿ ತೋಟದೊಳಗೆ ಕರೆದೊಯ್ದ.

ಅಡಿಕೆ, ಬಾಳೆಗಳಿಂದ ತುಂಬಿದ ತೋಟ ತಂಪಾಗಿತ್ತು. ಸಿಂಗಾರದ ಕಂಪು ಅಲ್ಲೆಲ್ಲ ಪಸರಿಸಿತ್ತು.

'ಸೊಳ್ಳೆ ಕಡೀಬಹುದು ಹುಶಾರಾಗಿರಿ' ಅಂತ ಎಚ್ಚರಿಸಿದ.

'ಅದೇನದು ದೊಡ್ಡಕೆರೆ? ತೋಟಕ್ಕೆ ಅದರದ್ದೆ ನೀರಾ?'

'ಹೌದು, ಸುತ್ತಮುತ್ತ ನೂರಾರು ಎಕರೆ ಗದ್ದೆಗೆ ನೀರುಣಿಸೊ ಕೆರೆ ಅದು. ಹಿಂದೆ ಅರಸರ ಕಾಲದಲ್ಲಿ ತೋಡಿಸಿದ್ದು. ಆ ಪಕ್ಕದಲ್ಲಿ ಏರಿಯ ಮೇಲೆ ರಾಣಿಗಾಗಿ ಒಂದು ಕಾಲದಲ್ಲಿ ಕಟ್ಟಿಸಿದ ಅರಮನೆಯ ಅವಶೇಷವಿದೆ.' ಇಬ್ಬರು ಕೂಲಿಯವರು ಕೆಲಸದಲ್ಲಿದ್ದರು. ಅವರಿಗೆ ಏನೇನೊ ಸೂಚನೆಗಳನ್ನು ಕೊಡುತ್ತ, ಕೆಳಗೆ ಬಿದ್ದ ಅಡಿಕೆ ಹಾಳೆಗಳನ್ನು ಕತ್ತರಿಸಿ ಮರಗಳ ಬುಡಕ್ಕೆ ಒಟ್ಟುತ್ತ ಆನಂದ ಓಡಾಡುತ್ತಿದ್ದ. ಚಂದನಿಕಾ ಒಂದು ಮರದಡಿ ನಿಂತು ಸುತ್ತೆಲ್ಲ ವೀಕ್ಷಿಸಿದಳು. ಹಸಿರು ಅಡಕೆಯ ಗೊಂಚಲುಗಳನ್ನು ತೂಗಿಹಾಕಿಕೊಂಡ ಮರಗಳು ಮಂದಗಾಳಿಗೆ ಓಲಾಡುತ್ತಿದ್ದವು. ಕೆಲವು ಮರಗಳಲ್ಲಿ ಹಣ್ಣಾದ ಅಡಕೆ ಕೆಂಪಗೆ ರತ್ನದ ಗುಚ್ಛದಂತೆ ಗೋಚರಿಸುತ್ತಿತ್ತು. ಎರಡೂ ಕೈಯಲ್ಲಿ ಎಳನೀರು ಹಿಡಿದುಕೊಂಡು ಆನಂದ ಹತ್ತಿರ ಬಂದ. ಆಗಷ್ಟೆ ಕೆಡವಿದ್ದು, ತಂಪಾಗಿ ಸಿಹಿಯಾಗಿತ್ತು. 'ಹೋಗೋಣವಾ?...' ಕೇಳಿದಾಗ ತುಟಿಯೊರೆಸಿಕೊಳ್ಳುತ್ತಾ ತಲೆಯಾಡಿಸಿದಳು. ಬೆಳೆದ ತೆಂಗಿನಕಾಯಿಗಳನ್ನು ಹೊತ್ತುತಂದ ಕೆಲಸದಾಳು ಓಮ್ನಿಯ ಡಿಕ್ಕಿಗೆ ಹಾಕಿದ.

ಬಲಕ್ಕೆ ತಿರುಗಬೇಕಾದ ಕಾರು ಎಡಕ್ಕೆ ತಿರುಗಿ ಕೆರೆಯ ಏರಿಯ ಮೇಲೆ ಹೋಗತೊಡಗಿದಾಗ ಅವಳಿಗೆ ಆಶ್ಚರ್ಯವಾಯಿತು. ಆನಂದ ಕೆರೆಯನ್ನು ಬಳಸಿ ಒಂದು ಮೂಲೆಯಲ್ಲಿ ಹೋಗಿ ನಿಲ್ಲಿಸಿದ. ಗುಡ್ಡವೊಂದರ ಮೇಲಕ್ಕೆ ಮಣ್ಣಲ್ಲಿ ಕಡಿದ ಮೆಟ್ಟಲೇರುತ್ತ ಅವನ ಹಿಂದೆ ಸಾಗಿದವಳನ್ನು ಸಮತಟ್ಟಾದ ಜಾಗವೊಂದಕ್ಕೆ ಕರೆದೊಯ್ದ. ಅಲ್ಲಿ ಅವರೆದುರು ನೆಲಪಾಯದ ಅವಶೇಷಗಳು ಪಸರಿಸಿದ್ದುವು. ದೊಡ್ಡ ಕಟ್ಟಡವೊಂದು ಅಲ್ಲಿದ್ದ ಕುರುಹು ಗೋಚರಿಸುತ್ತಿತ್ತು. ಎದುರುಗಡೆ ತಗ್ಗಿನಲ್ಲಿ ವಿಶಾಲವಾದ ಜಲರಾಶಿ ತರಂಗಗಳನ್ನೆಬ್ಬಿಸುತ್ತ ಹರಡಿಕೊಂಡಿತ್ತು. ರಾಣಿವಾಸದ ಹಜಾರ, ವಿಶ್ರಾಂತಿ ಕೋಣೆ, ಸ್ನಾನದ ತೊಟ್ಟಿಗಳ ಅವಶೇಷಗಳನ್ನು ತೋರಿಸಿದ ಆನಂದ. 'ನೀವೂ ಮುಂದೆ ಇಂತದೊಂದು ಜಾಗದಲ್ಲಿ ಬಂಗಲೆ ಕಟ್ಟಿಸಬಹುದು. ಅದಕ್ಕೇ ನೆನಪಲ್ಲಿಟ್ಟುಕೊಳ್ಳಿ' ಅಂತ ನಗುತ್ತ ಅಂದ.

ಸುತ್ತಲ ಪ್ರದೇಶಗಳಿಂದ ಎತ್ತರವಾದ ಜಾಗ. ಕೆಳಗಿನ ನೀರಪಾತಳಿಯನ್ನು ಸವರುತ್ತಾ ಗುಡ್ಡದಂಚಿಗೆ ಹಾಯ್ದು ಮೇಲೆದ್ದುಬರುವ ತಣ್ಣಗಿನ ಗಾಳಿ. ಎಲ್ಲಕ್ಕೂ ಮಿಗಿಲಾಗಿ ಜನಸಂಚಾರವಿಲ್ಲದ ಏಕಾಂತ. ಅವಳ ಮನಸ್ಸನ್ನು ಹಿತವಾಗಿ ತಟ್ಟಿ ಜೋಗುಳ ಹಾಡಿದಂತಿತ್ತು. ಆ ನಿಶ್ಚಿಂತ ನಿಲುವಿನ ಪದರನ್ನು ಆನಂದನ ಮಾತು ಅಲ್ಲಾಡಿಸಿದಂತಾಗಿ 'ಆನಂದ... ನಿಮ್ಮಲೊಂದು ಪ್ರಾರ್ಥನೆ. ದಯಮಾಡಿ ನನ್ನನ್ನೊಂದು ದೊಡ್ಡ ಸ್ಟಾರಾಗಿ, ಜನಾಕರ್ಷಣೆಯ ಕೇಂದ್ರವಾಗಿಯೆಲ್ಲ ಹೇಳಬೇಡಿ...' ಅವಳ ಮಾತಿನಲ್ಲಿಯ ಆರ್ತತೆ ತಟ್ಟಿದವನಂತೆ 'ಇಲ್ಲರೀ... ತಮಾಷೆಗಂದೆ' ಸಂತಯಿಸಲು ನೋಡಿದ.

'ನೋಡಿ, ಇನ್ನೊಂದು ಬೇಡಿಕೆ. ನನ್ನನ್ನ ನೀವು ಏಕವಚನದಲ್ಲಿ ಕರೀಬೇಕು. ಬಹುವಚನ ಹಿಂಸೆಯಾಗುತ್ತೆ. ಅಷ್ಟು ದೊಡ್ಡವಳಲ್ಲ ನಾನು' ಅಂದಳು.

'ಹಾಗಿದ್ರೆ ನೀನೂ ನನ್ನ ಏಕವಚನದಲ್ಲಿ ಕರೀತಿಯ?'

'ಅದು ಆಮೇಲಿನ ಮಾತು. ಈಗ ನಾ ಹೇಳಿದ್ದು ಮಾಡಿ ಅಷ್ಟೆ...' ಕೆಳಗಿನ ನೀರಿನಲ್ಲೇ ದೃಷ್ಟಿ ನೆಟ್ಟು ನಿಂತವಳ ನಿಲುವನ್ನು ನೋಡಿದ ಆನಂದನಿಗೆ ಪ್ರತ್ಯುತ್ತರ ಕೊಡುವುದು ಬೇಡವೆನಿಸಿತು. ಆಗಲೆ ಮಧ್ಯಾಹ್ನವಾಗಿತ್ತು. ಅವಳನ್ನು ಹೊರಡಿಸಿಕೊಂಡು ಮನೆಯತ್ತ ಹೊರಟ. ಮನೆಯಲ್ಲಿ ವ್ಯಾನಿಂದಿಳಿದವಳು 'ಇವತ್ತು ತುಂಬಾ ಖುಷಿಯಾಯ್ತು ನಂಗೆ ಆನಂದ್, ಥ್ಯಾಂಕ್ಸ್' ಅಂದಳು. ಅವಳ ಮುಖದಲ್ಲಿ ಒಂದು ಅಪೂರ್ವ ಸಂತೋಷ ನಿಜಕ್ಕೂ ಚಿಮ್ಮುತ್ತಿತ್ತು. ಕಲಾವಿದರ ಮೂಡು ಹೀಗೇ ಅಂತ ಹೇಳೋದು ಕಷ್ಟ ಅಂದುಕೊಂಡ ಆನಂದ.

8

ಸಾಯಂಕಾಲದ ಸಂಜೆಗತ್ತಲಲ್ಲಿ ಚಿತ್ರೀಕರಣವಿತ್ತು. ಹೊರಗಿನವರು ಯಾರೂ ಇರಲಿಲ್ಲ. ಕೋಣೆಯೆದುರು ನಡೆಯುತ್ತಿದ್ದುದಕ್ಕೆ ಹೊರಗೆ ಕಾಣುವಂತಿರಲೂ ಇಲ್ಲ. ನಾಯಕಿಯನ್ನು ಹುಡುಕುತ್ತ ಇಲ್ಲಿ ಬಂದು ತಲುಪಿದ ಸರದಾರನಿಗೆ ಗುರುತು ಹತ್ತದಂತೆ ಅವಳನ್ನು ಅಡಗಿಸಿ, ಗುರುಕುಲದ ಸ್ತ್ರೀಯಂತೆ ಪರಿಚಯಿಸುವ ಸನ್ನಿವೇಶ. ಕೂದಲನ್ನು ಗೋಪುರದಂತೆ ಮೇಲೆ ಗಂಟು ಹಾಕಿ, ಮೊಳಕಾಲ ಮೇಲೆ ಬರುವಂತೆ ಹೊಕ್ಕಳಿಗಿಂತ ಕೆಳಗೆ ನಾರುಬಟ್ಟೆ ಉಡಿಸಿದ್ದರು. ಮೇಲೆ ಬಿಳಿಯ ಬಟ್ಟೆಯೊಂದನ್ನು ಎದೆಕಟ್ಟಾಗಿ ಕಟ್ಟಿದ್ದರು. ಅಷ್ಟೆ ವಸ್ತ್ರ. ಕ್ರೇನ್ ಶೂಟಿಂಗಿನಲ್ಲಿ ಕ್ಯಾಮರಾ ವಿವಿಧ ಕೋನಗಳಲ್ಲಿ ಎಡ ಬಲ, ಮೇಲೆ ಕೆಳಗೆ ಚಲಿಸುತ್ತಿತ್ತು. ಆ ವೇಷದಲ್ಲಿ ಅವಳನ್ನು ನೋಡುತ್ತ ನಿಂತಿರಲಾಗದೆ ಆನಂದ ಮೆತ್ತಿಗೆ ಹೋದ. ಕಪಾಟಿನಲ್ಲಿ 'ರಾಜಾ ಭರ್ತೃಹರಿ' ಗ್ರಂಥ ಕಂಡಿತು. ತೆರೆದು ಕುಳಿತ.

***

ಶುಕ್ರವಾರದ ಪುರವಣಿಯಲ್ಲಿ ಧಾರಾವಾಹಿಯ ಬಗ್ಗೆ ಪಾಟೀಲ ಒಳ್ಳೇ ವಾಕ್ಯಗಳನ್ನು ಬರೆದಿದ್ದ. ಆದರೆ, ಪ್ರತಿಯೊಂದು ಸನ್ನಿವೇಶಕ್ಕೂ ಚೈತನ್ಯನಾಡಿಯಾಗಿ ನಿಂತಿರುವುದು ಆ ಸದನ ಅಂತ ಸೇರಿಸಿದ್ದ.

ಚಂದನಿಕಾಳ ಫೋಟೊ ಸುಂದರವಾಗಿ ಬಂದಿತ್ತು. ಒಳಪುಟ ತೆರೆದ ಆನಂದನಿಗೆ ಅರ್ಧಪುಟದಷ್ಟಿದ್ದ ಲೇಖನ ಕಾಣಿಸಿತು. ತಮ್ಮ ಮನೆ, ಹಿನ್ನೆಲೆಯಲ್ಲಿ ಅರ್ಧವೇ ಗೋಚರಿಸುವ ಮರಗಿಡಗಳಿಂದ ತುಂಬಿದ ಆ ಚಿಕ್ಕ ಗುಡ್ಡ. ಯಾವುದೇ ನಿಸರ್ಗಪ್ರಿಯನನ್ನೂ ಅತ್ತ ಸೆಳೆಯುವಂತೆ ಚಿತ್ರ ಹಿಡಿದಿದ್ದ ಪಾಟೀಲ. ಒಂದೂವರೆ ಸಾವಿರ ವರ್ಷಗಳ ಹಿಂದೆ, ಉಚ್ಛ್ರಾಯದಲ್ಲಿ ಈಗಿನ ಉತ್ತರ ಕರ್ನಾಟಕವನ್ನೂ ಒಳಗೊಂಡು, ನರ್ಮದಾ ತೀರದವರೆಗೂ ವಿಸ್ತರಿಸಿಕೊಂಡಿದ್ದ ಸಾಮ್ರಾಜ್ಯವೊಂದರ ವೈಭವ ಹೇಗಿದ್ದಿರಬಹುದು ಅಂತ ಈಗ ಊಹಿಸಲಾಗದು. ತಾನೊಂದು ಕೋಗಿಲೆಯಾಗಿ ಅದಾಗದಿದ್ದರೆ ಯಃಕಶ್ಚಿತ್ ದುಂಬಿಯಾದರೂ ಸಾಕು, ಆ ದೇಶದಲ್ಲಿ ಹುಟ್ಟಬೇಕೆಂದು ಮಹಾಕವಿಯೊಬ್ಬ ಹಂಬಲಿಸಿದ್ದು ಸುಮ್ಮನೆ ಇರಲಾರದು. ಯೋಧರು ಕುದುರೆಯೇರಿ ಖುರಪುಟವೆಬ್ಬಿಸುತ್ತ ಓಡಾಡಿದ ರಸ್ತೆಗಳು, ವ್ಯಾಪಾರಿಗಳು ಉಡುಗೆತೊಡುಗೆ, ಒಡವೆ, ಧವಸ ಧಾನ್ಯಗಳನ್ನು ರಾಶಿಯೊಟ್ಟಿದ ಉಗ್ರಾಣ, ಸಂತೆ ಬೀದಿಗಳು, ಹೋಗಲಿ ಹಲವುನೂರು ಮೈಲು ದೂರದ ಮೇರೆಯವರೆಗೆ ಶಾಸನದ ಬಾಹುಗಳನ್ನು ಆಡಿಸುತ್ತ ಕುಳಿತಿರುತ್ತಿದ್ದ ಕೇಂದ್ರಬಿಂದು, ಅರಸನ ಅರಮನೆಯ ಕುರುಹನ್ನು ಸಹ ಕಾಲ ತನ್ನ ಗರ್ಭಕ್ಕೆ ಹಾಕಿಕೊಂಡಿದೆ. ಕಣ್ಣಿಗೆ ಪಟ್ಟಿಕಟ್ಟಿದ ಕುದುರೆಯ ಸಾರಥಿಯಂತಹ



ಶಿಲ್ಪಾ ಕಬ್ಬಿಣಕಂತಿ

## ಲೀಲೆ

ಕೃಷ್ಣ ತೋರಿಸಿದ  
ಎಷ್ಟೊಂದು ಲೀಲೆ  
ಚಿಕ್ಕಂದಿನಲ್ಲೆ!  
ನಾನೇನು ಮಾಡಲಿ  
ಇರುವುದು  
ನನಗೊಬ್ಬಳೇ ನಲ್ಲೆ!

■ ವಿ. ಸುಬ್ರಹ್ಮಣ್ಯ ಭಟ್